**ಫ್ರಾಸಾ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 04-07-2025 ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

5. ನಂತರ ಲೋಕಾಯುಕ್ತ ನಿರೀಕ್ಷಕರು ಆರೋಪಿತರ ಸ್ವರಕ್ಷಣಾ ಹೇಳಿಕೆಯನ್ನು ನೀಡುವಂತೆ ಕೇಳಿದ್ದು ಅದರಂತೆ ಆರೋಪಿತರು ಬರೆದುಕೊಟ್ಟಿರುತ್ತಾರೆ. ಆರೋಪಿತರು ತಮ್ಮ ಸ್ವರಕ್ಷಣಾ ಹೇಳಿಕೆಯಲ್ಲಿ ಚಾಸಾ-1 ರವರು ತಮ್ಮ ಜಮೀನಿನ ಹಿಂಬರಹವನ್ನು ತಿದ್ದುಪಡಿ ಮಾಡಲು ಅವರ ಬಳಿ ಬಂದಿದ್ದು ಅವರೆ ತಮ್ಮ ಟೇಬಲ್ ಡ್ರಾನಲ್ಲಿ ಯಾವುದೇ ಹಣದ ಬೇಡಿಕೆ ಇಡದಿದ್ದರೂ ಹಣ ಹಾಕಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದನ್ನು ನೋಡಿ ನಾನು ಮತ್ತು ದೂರುದಾರ ಆರೋಪಿತರು ಹೇಳಿದ್ದು ಸುಳ್ಳು ಇರುತ್ತದೆ ಎಂದು ಲೋಕಾಯುಕ್ತ ನಿರೀಕ್ಷಕರಿಗೆ ತಿಳಿಸಿರುತ್ತೇವೆ. ಸದರಿ ಸ್ವರಕ್ಷಣಾ ಹೇಳಿಕೆಗೆ ಸಹಿ ಮಾಡಿರುತ್ತೇವೆ. ನಿ.ಪಿ.20 ನ್ನು ಸಾಕ್ಷಿಗೆ ತೋರಿಸಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ.20(ಎ) ಎಂದು ಗುರುತಿಸಲಾಯಿತು. ನಿ.ಪಿ.20 ರಲ್ಲಿನ ಶಿವರೆಡ್ಡಿ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಪಿ.20(ಬಿ) ಎಂದು ಗುರುತಿಸಲಾಯಿತು. ನಿ.ಪಿ.20 ರಲ್ಲಿನ ಆರೋಪಿತರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.20(ಸಿ) ಎಂದು ಗುರುತಿಸಲಾಯಿತು.

6. ನಂತರ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಎಲ್ಲ ವಸ್ತುಗಳನ್ನು ಪೊಲೀಸ ನಿರೀಕ್ಷಕರು ತಮ್ಮ ವಶಕ್ಕೆ ಪಡೆದರು. ಈ ಪ್ರಕರಣದಲ್ಲಿ ಬಳಕೆ ಮಾಡಿದ ಒಂದು ಕಬ್ಬಿಣದ "GJ" ಸೀಲನ್ನು ನನಗೆ ನೀಡಿ ಅದನ್ನು ವಿಚಾರಣೆಯ ಸಮಯದಲ್ಲಿ ಹಾಜರಪಡಿಸುವಂತೆ ತಿಳಿಸಿರುತ್ತಾರೆ. ಸಾಕ್ಷಿ ತನ್ನ ಬಳಿ ಇಟ್ಟುಕೊಂಡಿದ್ದ ಸದರಿ GJ ಸೀಲನ್ನು ತೆಗೆದು ಹಾಜರಪಡಿಸಿದ್ದು ಅದನ್ನು ಮು.ಮಾ.13 ಎಂದುಗುರುತಿಸಲಾಯಿತು.

7. ನಂತರ ಸದರಿ ಪ್ರಕರಣದ ಸಂಪೂರ್ಣ ಘಟನೆಯನ್ನು ಛಾಯಚಿತ್ರಕರಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನಿ.ಪಿ.21 ರಿಂದ 29 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ವಿಷಯವಾಗಿ ದಿಃ 15.03.2014 ರಂದು ಪೊಲೀಸರು ಮಧ್ಯಾಹ್ನ 1-15 ರಿಂದ 3-00 ಗಂಟೆಯ ವರೆಗೆ ತಹಶೀಲ್ದಾರ ಕಾರ್ಯಾಲಯದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ಪೊಲೀಸರು ತಯಾರಿಸಿ ನನ್ನ ಮತ್ತು ಶಿವರೆಡ್ಡಿ ಮತ್ತು ಪೊಲೀಸ ಉಪ-ನಿರೀಕ್ಷಕರ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಕಚ್ಚಾ ನಕಾಶೆ ತೋರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿ.ಪಿ.35 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.35(ಎ) ಇನ್ನೊಬ್ಬ ಪಂಚ ಶಿವರೆಡ್ಡಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.35(ಬಿ) ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ದಾಳಿಗೆ ಒಳಗಾಗಿರುವ ಆರೋಪಿತರು ನ್ಯಾಯಾಲಯದ ಮುಂದೆ ಇರುವವರು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.30 ನ್ನು ಸಾಕ್ಷಿಗೆ ತೋರಿಸಿ ತಮ್ಮ ಸಹಿ

ಗುರುತಿಸಿದ್ದು ಅದನ್ನು ನಿ.ಪಿ.೩೦(ಎ) ಎಂದು ಇನ್ನೊಬ್ಬ ಪಂಚ ಶಿವರೆಡ್ಡಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.೩೦(ಬಿ) ಎಂದು ಗುರುತಿಸಲಾಯಿತು. ನಿ.ಪಿ.೩೦ ರ ಪ್ರತಿಯನ್ನು ಆರೋಪಿಗೆ ನೀಡಿ ಸಹಿ ಪಡೆಯಲಾಗಿರುತ್ತದೆ. ನಿ.ಪಿ.೩೦ ರ ಮೇಲಿನ ಆರೋಪಿಯ ಸಹಿಯನ್ನು ನಿ.ಪಿ.೩೦(ಸಿ) ಎಂದು ಗುರುತಿಸಲಾಯಿತು.

೪. ದಿಃ ೨೪.06.2014 ರಂದು ಲೋಕಾಯುಕ್ತ ಪೊಲೀಸರ ಕೋರಿಕೆಯ ಮೇರೆಗೆ ಮತ್ತು ನಮ್ಮ ಮುಖ್ಯ ಗುರುಗಳ ಆದೇಶದ ಮೇರೆಗೆ ನಾನು ಲೋಕಾಯುಕ್ತ ಠಾಣೆಗೆ ಹಾಜರಾಗಿ ಉಪ-ನಿರೀಕ್ಷಕರನ್ನು ಬೇಟಿ ಮಾಡಿ ಅವರು ನನ್ನನ್ನು ಶಹಾಪೂರದ ಲೋಕೋಪಯೋಗಿ ಕಛೇರಿಗೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ-೪ ಮಿರಾಜುಲ್ಲಾ ರವರನ್ನು ಬೇಟಿ ಮಾಡಿಸಿರುತ್ತಾರೆ. ನಂತರ ನಾನು, ಚಾಸಾ-೪, ಲೋಕಾಯುಕ್ತ ಪೊಲೀಸರು ಜೊತೆಯಲ್ಲಿ ಶಹಾಪೂರ ತಹಶೀಲ್ದಾರ ಕಛೇರಿಗೆ ಹೋಗಿದ್ದು ಚಾಸಾ-೪ ರವರಿಗೆ ನಾನು ಈ ಪ್ರಕರಣದ ಘಟನೆಯ ಸಮಯದಲ್ಲಿ ದೂರು ದಾರರು, ನಾನು ಎಲ್ಲಿನಿಂತ್ತಿದ್ದೆವು ಮತ್ತು ಆರೋಪಿತರು ಎಲ್ಲಿ ಕುಳಿತ್ತಿದ್ದರು ಎಂಬುವದನ್ನು ಚಾಸಾ-೪ ರವರಿಗೆ ತೋರಿಸಿದ್ದು ಅವರು ಒಂದು ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿದ್ದರು. ಅದರಂತೆ ನಾನು ಲೋಕಾಯುಕ್ತ ಪೊಲೀಸರ ಮುಂದೆ ದಿಃ 16.03.2014 ರಂದು ಹೇಳಿಕೆಯನ್ನು ಮತ್ತು ದಿಃ ೨೪.03.2014 ರಂದು ಮರು ಹೇಳಿಕೆಯನ್ನು ನೀಡಿರುತ್ತೇನೆ. ದಿಃ 16.03.2014 ರಂದು ಚಾಸಾ-3 ಶಿವರೆಡ್ಡಿ ಸಹ ನನ್ನಂತೆ ಹೇಳಿಕೆ ನೀಡಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

ಆರೋಪಿತರ ಪರ ವಕೀಲರಿ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.